ಸೆಲೆಬ್ರಿಟಿ

■ ಹನಿ

# ಸಂಶಯದ ಸುಳಿಯಲ್ಲಿ!



ಐಪಿಎಲ್ 'ಸ್ಪಾಟ್ ಫಿಕ್ಸಿಂಗ್' ಹಗರಣದ ಬಗ್ಗೆ ಭಾರತ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ದೋನಿಯವರಿಗೆ ಮೊದಲೇ ಗೊತ್ತಿತ್ತೆ? ಐಪಿಎಲ್‌ನಲ್ಲಿ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಲ್ಲಿ ಬಂಧಿತನಾಗಿರುವ ಬಾಲಿವುಡ್ ನಟ ವಿಂದೂ ದಾರಾಸಿಂಗ್ ಜತೆಗೆ ದೋನಿಯ ಪತ್ನಿ ಸಾಕ್ಷಿಸಿಂಗ್ ರಾವತ್ ವ್ಯಾವಹಾರಿಕ ಸಂಬಂಧ ಇಟ್ಟುಕೊಂಡಿದ್ದರೆ? ಮ್ಯಾಚ್ ಫಿಕ್ಸಿಂಗ್ ಹಗರಣದ ಮುಖ್ಯ ಆರೋಪಿ, ಬಿಸಿಸಿಐ ಅಧ್ಯಕ್ಷ ಕೆ.ಶ್ರೀನಿವಾಸನ್‌ರ ಅಳಿಯ, ಚೆನ್ನೈ ತಂಡದ ಮಾಲೀಕ ಮೇಯಪ್ಪನ್ ಬಂಧನದ ಬಗ್ಗೆ ದೋನಿ ಚಕಾರ ಎತ್ತುತ್ತಿಲ್ಲವೇಕೆ?

–ಮಹೇಂದ್ರಸಿಂಗ್ ದೋನಿ ಭಾರತದ ಕ್ರಿಕೆಟ್ ತಂಡ ಕಂಡ ಅತ್ಯಂತ ಯಶಸ್ವಿ ನಾಯಕ ಎನ್ನುವುದರಲ್ಲಿ ಎರಡು ಮಾತಿಲ್ಲ. ದೋನಿ ಕ್ರಿಕೆಟ್‌ಗೆ ನೀಡಿರುವ ಕೊಡುಗೆಯ ಬಗ್ಗೆ ಯಾರೂ ಅಲ್ಲಗಳೆಯುವುದಿಲ್ಲ. ದೋನಿ ನಾಯಕತ್ವದಲ್ಲಿ ಅತ್ಯಂತ ಹೆಚ್ಚು ಟೆಸ್ಟ್ ಮತ್ತು ಏಕದಿನ ಪಂದ್ಯಗಳನ್ನು ಭಾರತ ಗೆದ್ದಿದೆ. ಟ್ವೆಂಟಿ–20ನಲ್ಲೂ ದೋನಿ ಭಾರತದ ಮೇಲುಗೈಗೆ ಕಾರಣರಾಗಿದ್ದಾರೆ. ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಭಾರತ 'ನಂಬರ್ ಒನ್' ಆದದ್ದು ದೋನಿ ನಾಯಕತ್ವದಲ್ಲೇ. ಭಾರತ 2011ರಲ್ಲಿ ವಿಶ್ವಕಪ್ ಗೆದ್ದದ್ದೂ ದೋನಿ ನೇತೃತ್ವದಲ್ಲೇ. ವಿಶ್ವದ ಅತ್ಯುತ್ತಮ ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿರುವ ದೋನಿ 2009ರ 'ಐಸಿಸಿ ವಿಶ್ವ ತಂಡ'ದ ನಾಯಕನಾಗಿಯೂ ಆಯ್ಕೆಯಾದವರು.

ಇವೆಲ್ಲ ದಾಖಲೆಗಳ ಮಾತಾಯಿತು. ಕ್ರೀಡಾಂಗಣದಲ್ಲಿ ದೋನಿಯ ಶಿಸ್ತು ಮತ್ತು ಶ್ರದ್ಧೆಯ ಬಗ್ಗೆಯೂ ಯಾರೂ ಬೆರಳು ತೋರಿಸಲಾಗದು. ಆದರೆ ಈಗ ಬಂದಿರುವುದು ಪ್ರಾಮಾಣಿಕತೆ ಮತ್ತು ಕ್ರೀಡಾನಿಷ್ಠೆಯ ಪ್ರಶ್ನೆ. ಐಪಿಎಲ್‌ನಲ್ಲಿ ಹಣ, ಹೆಣ್ಣು, ಹೆಂಡಕ್ಕಾಗಿ ಕ್ರಿಕೆಟ್ ಮೌಲ್ಯಗಳನ್ನು ಬಲಿಕೊಟ್ಟು ವಂಚನೆಯ ಆಟವಾಡುವವರು ಇದ್ದಾರೆಂಬುದು ದೋನಿಗೂ ಗೊತ್ತಿರಲಿಕ್ಕಿಲ್ಲ. ಆದರೆ ಐಪಿಎಲ್ ಸ್ಪಾಟ್ ಫಿಕ್ಸಿಂಗ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ನ ಪಾತ್ರವೇನು ಎನ್ನುವುದೀಗ ಮಹತ್ವದ ಸಂಗತಿ. ಚೆನ್ನೈ ತಂಡದ ಸಿಇಓ ಮೇಯಪ್ಪನ್, ಈ ಜೂಜಾಟದಲ್ಲಿ ತೊಡಗಿದ್ದಕ್ಕೆ ಸಾಕಷ್ಟು ದಾಖಲೆಗಳಿವೆ. ಅವರ ಮಾವ ಬಿಸಿಸಿಐ ಅಧ್ಯಕ್ಷ ಕೆ.ಶ್ರೀನಿವಾಸ್ ರಕ್ಷಣೆಯೂ ಅವರಿಗಿದ್ದಿರಬೇಕು ಎಂಬ ಅನುಮಾನಗಳು ಬಲವಾಗಿವೆ. ಶ್ರೀನಿವಾಸನ್‌ಗೆ ತೀರಾ ನಿಕಟವರ್ತಿ ನಮ್ಮ ದೋನಿ. ಶ್ರೀನಿವಾಸನ್ ಮಾಲಕತ್ವದ ಇಂಡಿಯಾ ಸಿಮೆಂಟ್ ಕಂಪೆನಿಯ ಉಪಾಧ್ಯಕ್ಷರಾಗಿರುವ ದೋನಿ, ಇಡೀ ಹಗರಣದ ಬಗ್ಗೆ ಮೌನ ವಹಿಸಿರುವುದು ಅನುಮಾನಗಳನ್ನು ಇನ್ನಷ್ಟು ಹೆಚ್ಚಿಸಿದೆ. ಭಾರತ ತಂಡದ ನಾಯಕರೂ ಆಗಿ ದೋನಿ ಕ್ರಿಕೆಟ್ ಭ್ರಷ್ಟಾಚಾರದ ವಿಷಯದಲ್ಲಿ ತುಟಿಪಿಟಿಕ್ ಎನ್ನದೇ ಇರಲು, ಅವರು ಶ್ರೀನಿವಾಸನ್ ಜತೆಗೆ ಹೊಂದಿರುವ ವ್ಯವಹಾರದ ಸಂಬಂಧ ಕಾರಣ ಇರಬಹುದೆ? ಈ ವ್ಯವಹಾರಕ್ಕೂ ಕ್ರಿಕೆಟ್ ಕಳ್ಳಾಟಕ್ಕೂ ಸಂಬಂಧ ಇಲ್ಲವೆ? ಚೆನ್ನೈ ತಂಡ ಒಂದೊಂದಾಗಿ ಐಪಿಎಲ್ ಪಂದ್ಯಗಳನ್ನು ಗೆದ್ದಂತೆಯೇ, ಇಂಡಿಯಾ ಸಿಮೆಂಟಿನ ಷೇರು ದರಗಳು ಮಾರ್ಕೆಟ್‌ನಲ್ಲಿ ಏರಿದ್ದು ಸತ್ಯವಲ್ಲವೆ? ಜೂಜಾಟದ ಬುಕ್ಕೀಗಳು ಪಂದ್ಯದ ಆಟಗಾರರ ಮೇಲೆ ಹಿಡಿತ ಸಾಧಿಸುವಲ್ಲಿ ಮೇಯಪ್ಪನ್ ಪಾತ್ರ ಇರುವಾಗ, ದೋನಿ ಮೌನ ಏನನ್ನು ಹೇಳುತ್ತದೆ?

ಐಪಿಎಲ್ ಭ್ರಷ್ಟಾಚಾರದ ಬಗ್ಗೆ ಈಗಾಗಲೆ ಸಚಿನ್ ತೆಂಡೂಲ್ಕರ್ ಬಹಿರಂಗವಾಗಿ ಕಿಡಿ ಕಾರಿದ್ದಾರೆ. ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳು ಸಿಟ್ಟಿಗೆದ್ದಿದ್ದಾರೆ. 'ಸಮಯ ಬಂದಾಗ ಮಾತನಾಡುತ್ತೇನೆ' ಎಂದು ದೋನಿ ಹೇಳಿರುವುದು ಆತನ ಜಾಣತನಕ್ಕಿಂತ ಹೆಚ್ಚಾಗಿ ಮೂರ್ಖತನವನ್ನೇ ಸೂಚಿಸುವಂತಿದೆ. ಮೌಲ್ಯಗಳ ಬಗ್ಗೆ ಮಾತನಾಡಲು ಸಮಯ ಕಾಯುವುದು ರಾಜಕಾರಣಿಗಳ ಲಕ್ಷಣ ಅಷ್ಟೇ. ಜಗತ್ತಿನ 'ಟಾಪ್ ಟೆನ್' ಶ್ರೀಮಂತ ಕ್ರಿಕೆಟಿಗರಲ್ಲಿ ಒಬ್ಬನಾಗಿರುವ, 'ವಿಶ್ವದ 31ನೇ ಅತಿ ಶ್ರೀಮಂತ ಕ್ರೀಡಾಪಟು'ವಾಗಿರುವ ದೋನಿಗೆ ಇದು ಗೊತ್ತಿಲ್ಲ ಎಂದರೆ ನಂಬುವುದು ಕಷ್ಟ!







Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008,

©All rights reserved. Reproduction in whole or in part without permission is prohibited.
RNI No 7891/65